# ಹೆಣ್ಣೀನ ಗೋಳ್ಗತ್ತಿ

ನಾವು ಬದುಕುತ್ತಿರುವ ಜಗತ್ತಿನಿಂದಲೇ ಈ ಬರ್ಬರ ಸುದ್ದಿ ಬಂದಿದ್ದು. ಈಶಾನ್ಯ ಭಾರತದ ಇಬ್ಬರು ಆದಿವಾಸಿ ಮಹಿಳೆಯರನ್ನು ಯುವಕರ ತಂಡವೊಂದು ನಡುಹಗಲಿನಲ್ಲೇ ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿದ ಸುದ್ದಿ ಯಾವುದೇ ಸಮಾಜಕ್ಕೆ ತೀವ್ರ ಆಘಾತಕಾರಿಯಾದದ್ದು. ಇಂತಹ ಅಮಾನುಷ ಸನ್ನಿವೇಶದಲ್ಲಿ ಆ ಈರ್ವರು ಮಹಿಳೆಯರ ಮನಸ್ಸಿನಲ್ಲಿ ಕುದಿಯುತ್ತಿದ್ದ ಲಾವಾರಸದಂತಹ ಮಾತುಗಳು ಏನಾಗಿದ್ದವು! ಆ ಸಮಯದಲ್ಲಿ ಅವರ ಕಣ್ಣೀರು ಯಾವುದೇ ದಾರ್ಶನಿಕನಿಗಿಂತ ಮಿಗಿಲಾದ ಸತ್ಯವನ್ನು ಜಗತ್ತಿನೆದುರು ಹೇಳುವಂತಿದ್ದವು. ಈ ಸುದ್ದಿಯನ್ನು ಕೇಳಿದ ಈ ಸಮಾಜಕ್ಕೆ ಕೊನೆಯಪಕ್ಷ ಪಶ್ಚಾತ್ತಾಪ, ಲಜ್ಜೆಯಿಂದ ತಲೆತಗ್ಗಿಸಲು ಸಾಧ್ಯವಾಗಲೇ ಇಲ್ಲ ಎನ್ನುವುದು ಇನ್ನೂ ಹೆಚ್ಚಿನ ಭೀತಿಯುಂಟು ಮಾಡುವ ಸಂಗತಿ.

ಇದನ್ನೆಲ್ಲಾ ನಮ್ಮ ನತದೃಷ್ಟ ಕಣ್ಣುಗಳಿಂದ ನೋಡಿದ ಮನುಕುಲದ ಪ್ರಾರ್ಥನೆಯ ಸೊಲ್ಲುಗಳೆಲ್ಲ ಭೂಮಿಯಲ್ಲಿ ಸಮಾಧಿಯಾದವು. ಎಲ್ಲ ವೃಕ್ಷಗಳಲ್ಲಿದ್ದ ಹೂವು, ಹಣ್ಣುಗಳು ಆಶಾವಾದದ ಬಣ್ಣ ಮತ್ತು ಕನಸುಗಳನ್ನು ಕಳೆದುಕೊಂಡು ಮಣ್ಣಿಗೆ ಉದುರಿಬಿದ್ದವು. ಈ ಅಪಾಯದ ಗಂಟೆಯ ಸದ್ದು ಮುಂದೆ ನಮ್ಮನ್ನು ಆವರಿಸಿಕೊಳ್ಳಬಹುದಾದ ಯಾವುದೋ ಬರ್ಬರ ವ್ಯವಸ್ಥೆಗೆ ಮುನ್ಸೂಚನೆಯೇ? ನೈತಿಕತೆ ಹಾಗೂ ಸಹಿಷ್ಣುತೆಯನ್ನು ಕಳೆದುಕೊಂಡ ಸಮಾಜ ಯಾವಾಗಲೂ ವಿಕೃತ ಹಿಂಸೆಯನ್ನೇ ಆರಾಧಿಸುತ್ತಿರುತ್ತದೆ. ಮಹಿಳೆಯನ್ನು ಆಕೆಯ ವಕ್ಷಸ್ಥಳದಿಂದ ಕೆಳಗೆ ನೋಡುವ ಪುರುಷರ ನೋಟವೆಲ್ಲ ಲೈಂಗಿಕ ಭಾವನೆಯದ್ದೇ ಆಗಿರುತ್ತದೆ ಎನ್ನುತ್ತಾರೆ ಮನಃಶಾಸ್ತ್ರಜ್ಞರು. ಮಹಿಳೆಯರು ಅನುಭವಿಸುವ ಇಂತಹ ಹಿಂಸೆಯ ಸನ್ನಿವೇಶದಲ್ಲಿ ಗಾಂಧಿಯವರ ಮಾತು ನಮಗೆ ನೆರವಿಗೆ ಬರಬೇಕು 'ತನ್ನ ಮಾನವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ತನ್ನ ಮನಸ್ಸಿಗೆ ತೋರಿದ ಎಲ್ಲ ವಿಧಾನಗಳನ್ನೂ, ಸಾಧನಗಳನ್ನೂ ಉಪಯೋಗಿಸುವ ಸ್ವಾತಂತ್ರ್ಯವನ್ನು ಅವಳಿಗೆ ದೇವರು ಕೊಟ್ಟಿದ್ದಾನೆ. ತನ್ನ ಸಮಗ್ರ ಶಕ್ತಿಯಿಂದ ಅವುಗಳನ್ನು ಆಕೆ ಉಪಯೋಗಿಸಬೇಕು'.

ಮನುಕುಲ ಕಾಣಬಾರದಾಗಿದ್ದ ಈ ಹೇಯ ಘಟನೆಯಲ್ಲಿ ಪಾಲ್ಗೊಂಡವರೆಲ್ಲ ಬಹುಪಾಲು ಅಲ್ಪಸ್ವಲ್ಪ ವಿದ್ಯಾವಂತ ಯುವುಕರೇ ಆಗಿದ್ದರೆಂಬುದನ್ನು ನೋಡಿದಾಗ ಗಂಟಲಿಗೆ ನೀರು ಇಳಿಯುವುದಿಲ್ಲ. ಯುವಕರ ಈ ಅಧೋಗತಿಗೆ ಏನು ಕಾರಣ ಎಂದು ಯೋಚಿಸಿದರೆ, ಸಿಗುವ ಉತ್ತರ ಅಷ್ಟೇನು ಜಟಿಲವಲ್ಲ. ಹೆಣ್ಣಿನ ಬಗ್ಗೆ ಇರುವ ಕ್ಷುದ್ರ ತಿಳಿವಳಿಕೆ, ನೈತಿಕತೆ ಹಾಗೂ ಮಾನವತೆಯ ಅಭಾವ. ಇವುಗಳನ್ನೆಲ್ಲಾ ಮೀರಿಸುವಂತಹ ಲೋಲುಪತೆ ಹಾಗೂ ಅವೈಚಾರಿಕತೆ ಇವರನ್ನು ಈ ದುಸ್ಥಿತಿಗೆ ತಂದಿವೆ ಎನಿಸುತ್ತದೆ! ಇಂತಹ ಸನ್ನಿವೇಶದಲ್ಲಿ ದೋಷವಿರುವುದು ಕಲಿಯುವವರಲ್ಲೇ ಹೊರತು, ಏನನ್ನು ಕಲಿಸುತ್ತಿದ್ದೇವೆ ಎಂಬುದರ ಕಡೆಗೆ ನಮ್ಮ ತಿಳಿವು ಹೊರಳುವುದಿಲ್ಲ! ಹಾಗಾದರೆ ಇಷ್ಟು ವರ್ಷ ನಾವು ಯುವಕರಿಗೆ ಯಾವ ಬಗೆಯ ಶಿಕ್ಷಣವನ್ನು ನೀಡಿದೆವು? ನಿಜವಾದ ಶಿಕ್ಷಣ ಎನ್ನುವುದು ಕೇವಲ ತರಗತಿಯ ಪಠ್ಯಗಳಲ್ಲಿ ಮಾತ್ರ ಇರುವುದಿಲ್ಲ! ಅದು ನಮ್ಮ ಕೌಟುಂಬಿಕ, ಸಾಮಾಜಿಕ ಪಠ್ಯಗಳಲ್ಲಿ ಹಾಗೂ ಮಾನವ ಸೃಷ್ಟಿಸಿದ ಎಲ್ಲ ಕಲೆಗಳಲ್ಲಿ ಹುದುಗಿರುತ್ತದೆ. ಮಾನವತೆ, ವಿವೇಕ ಹಾಗೂ ಕಾರುಣ್ಯದ ಅರಿವು ಮೂಡಿಸುವ ಶಿಕ್ಷಣ ಎಂಬುದು ಎಲ್ಲೆಂದರಲ್ಲಿ ಕೈ ಚಾಚಿದರೆ ಸಿಗುವ ನೀರಿನ ಒರತೆ. ಆದರೆ ಅದರಿಂದ ನೀರು ಕುಡಿಯುವವರು ಬಹು ಕಡಿಮೆ!

ಹೆಣ್ಣಿನ ಬಗ್ಗೆ ಮಹಾಭಾರತದ ಕೀಚಕ ವಧೆ ಪ್ರಸಂಗದಲ್ಲಿ, ಅವನು ನಿತ್ಯವೂ ತನಗೆ ನೀಡುತ್ತಿದ್ದ ಹಿಂಸೆಯನ್ನು ತಡೆಯಲಾರದ ದ್ರೌಪದಿ ಕುಪಿತಗೊಂಡು 'ಇನ್ನು ಹುಟ್ಟದೆಯಿರಲಿ ನಾರಿಯ / ರೆನ್ನವೊಲು ಭಂಗಿತರು ಭುವನದೊ / ಳಿನ್ನು ಜನಿಸಲು ಬೇಡ...', '..ಕೂಳುಗೇಡಿಂಗೊಡಲ ಹೊರುವಿರಿ. ನೀವು ಹೆಣ್ಣ ಕೊಂದಿರಿ' ಎಂದು ತನ್ನ ಗಂಡಂದಿರನ್ನು ಜರಿದು ನುಡಿಯುತ್ತಾಳೆ. ಇವಳಂತೆಯೇ ಮಹಾಭಾರತದಲ್ಲಿ ಹೆಚ್ಚು ನೊಂದವಳು ಗಾಂಧಾರಿ. ಯುದ್ಧ ಕಳೆದ ಮಹಾಭಾರತದ ಉಳಿದ ಕತೆಯನ್ನು ಕುಮಾರವ್ಯಾಸ ಬರೆದಿದ್ದರೆ, ಅದು ಬರೀ ಗಂಡನನ್ನು ಕಳೆದುಕೊಂಡ ಸಾವಿರಾರು ವಿಧವೆಯರ ವ್ಯಥೆಯಾಗುತ್ತಿತ್ತು ಎನ್ನುವುದು ಸುಳ್ಳಲ್ಲ! ನಮ್ಮ ಗ್ರಾಮೀಣ ಭಾಗದ ಹೆಣ್ಣುಮಕ್ಕಳೂ ಕೂಡ 'ಹೆಣ್ಣೀನ ಗೋಳ್ಗತ್ತಿ ಬನ್ನೀಯ ಮರಬೆಂದೊ/ ಅಲ್ಲಿ ಸನ್ಯಾಸಿ ಮಠ ಬೆಂದೊ ಪಾಪಿಗಳ/ ಪಂಚಾಂಗ ಕತ್ತಿ ಉರಿದಾವೆ' ಎಂದು ತಾವು ಪುರುಷ ಸಮಾಜದ ಕ್ರೌರ್ಯದಿಂದ ಅನುಭವಿಸುತ್ತಿದ್ದ ಎದೆಯಾಳದ ಸಂಕಟವನ್ನೆಲ್ಲಾ ಕೆಲವೇ ಮಾತುಗಳಲ್ಲಿ ತೋಡಿಕೊಂಡಿದ್ದಾರೆ.

ನಮ್ಮ ಪುರಾಣಗಳು, ನೀತಿಸಂಹಿತೆಗಳು ಹೆಣ್ಣಿನ ಬಗ್ಗೆ ಬಣ್ಣಕಟ್ಟಿ ಹೇಳುವ ಮಾತುಗಳು ವರ್ತಮಾನದ ಸಮಾಜದಲ್ಲಿ ಎಷ್ಟು ಹುಸಿಯಾದವು ಎನ್ನುವುದನ್ನು ಹೇಳುತ್ತವೆ. ಕೆಲವರು 'ಹೆಣ್ಣು ನರಕಕ್ಕೆ ದಾರಿ' ಎಂದಿದ್ದಾರೆ. 'ಜ್ಞಾನವು ಪುರುಷನ ಗೌರವವನ್ನು ಹೆಚ್ಚಿಸಿದರೆ, ಅಜ್ಞಾನವು ಸ್ತ್ರೀಯರ ಸೌಂದರ್ಯವನ್ನು ಹೆಚ್ಚಿಸುವುದು' (ಚೀನಾ ಗಾದೆ). 'ಮೈದಾನದಲ್ಲಿರುವ ಕುದುರೆಯನ್ನು, ಮನೆಯಲ್ಲಿರುವ ಹೆಂಗಸನ್ನು ನಂಬಬೇಡ' (ರಷ್ಯಾ ಗಾದೆ). ಇಂತಹ ಮನಸ್ಥಿತಿ ಇರುವ ಪುರುಷಾಧೀನ ಸಮಾಜದ ನಡುವೆ ಮಹಿಳೆಯ ಸೃಜನಶೀಲತೆ ಅರಳುವುದಾದರೂ ಹೇಗೆ? ಗ್ರಾಮೀಣ ಜೀವನದಲ್ಲೂ ಹೆಣ್ಣನ್ನು ಕುರಿತ ಇಂತಹುದೇ ಮನಸ್ಥಿತಿ ಇದೆ. ಕೆರೆಗಾಗಿ ಮಹಿಳೆಯೋರ್ವಳನ್ನು ನಿರ್ದಯವಾಗಿ 'ಕೆರೆಗೆಹಾರ' ಕೊಡುವುದು ಅವುಗಳಲ್ಲಿ ಒಂದು. ಜಗತ್ತಿನ ಇತಿಹಾಸ ಮತ್ತು ಕೆಲವು ಧರ್ಮಗ್ರಂಥಗಳಲ್ಲಿ ಹೆಣ್ಣಿನ ಆತ್ಮಗೌರವಕ್ಕೆ ಗಾಸಿಯುಂಟು ಮಾಡುವ ನೂರಾರು ಮಾತುಗಳಿವೆ.

ಇದೆಲ್ಲದರ ನಡುವೆ ಗಾಂಧಿ ಹೇಳಿದ ಮಾತು ಗಮನಸೆಳೆಯುತ್ತದೆ: 'ನಾನು ಹೆಂಗಸಾಗಿ ಹುಟ್ಟಿದ್ದರೆ, ಹೆಂಗಸು ಹುಟ್ಟಿರುವುದೇ ಗಂಡಸಿನ ಆಟದ ವಸ್ತುವಾಗಿರುವುದಕ್ಕೆ ಎಂದು ಹೇಳುವ ಗಂಡಸಿನ ಪ್ರತಿಷ್ಠೆಗೆ ವಿರುದ್ಧವಾಗಿ ದಂಗೆಯೇಳುತ್ತಿದ್ದೆ. ಅವಳ ಹೃದಯವನ್ನು ಹೊಗುವುದಕ್ಕಾಗಿ ನಾನು ಮನಸಾ ಸ್ತ್ರೀಯಾಗಿದ್ದೇನೆ'.

**■ ಜೆ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ನಾವು ಬಯಸಿದಂತೆ ಬದುಕುವ ಸ್ವಾತಂತ್ರ್ಯ ಯಾವತ್ತು ಭಯಾನಕ ಹೋರಾಟದ ಫಲವೇ ಹೊರತು ಸುಲಭಕ್ಕೆ ಸಿಗುವುದಿಲ್ಲ.
  —ಪೂರ್ಣಚಂದ್ರ ತೇಜಸ್ವಿ

- ತನುವಿನ ಕೋಪ ತನ್ನ ಹಿರಿತನದ ಕೇಡು, ಮನದ ಕೋಪ ತನ್ನ ಅರಿವಿನ ಕೇಡು.
  —ಬಸವಣ್ಣ

- ನಮ್ಮ ವಿಚಾರಗಳನ್ನು ಮಾತೃಭಾಷೆಯಲ್ಲಿ ಸರಳವಾಗಿ ಮತ್ತು ಸ್ಪಷ್ಟವಾಗಿ ವ್ಯಕ್ತಪಡಿಸಲು ಸಾಧ್ಯವಾಗುವಂತೆ, ಬೇರೆ ಯಾವ ಭಾಷೆಯಲ್ಲೂ ವ್ಯಕ್ತಪಡಿಸಲು ಆಗುವುದಿಲ್ಲ.
  —ಮಹಾತ್ಮ ಗಾಂಧಿ

- ಬಾಳೆಂಬುದು ಕನಸಲ್ಲ, ಗೋಳಿನ ತಿನಿಸಲ್ಲ, ನಮ್ಮೆಲ್ಲರ ಹಿಗ್ಗಿನ ಹೊಸ ತೋಟ.
  —ಆನಂದಕಂದ

- ದುಡ್ಡು ಅಂದರೆ ದುಡಿದು ತರಬೇಕಾದ ವಸ್ತು.
  —ನಾ. ಕಸ್ತೂರಿ

- ಒಬ್ಬರು ಮತ್ತೊಬ್ಬರನ್ನು ತಿಂದು ಬದುಕಬಾರದು, ತಿಳಿದು ಬದುಕಬೇಕು.
  —ದ.ರಾ. ಬೇಂದ್ರೆ

- ಪ್ರತಿಯೊಬ್ಬ ವ್ಯಕ್ತಿಯೂ ತನಗೆ ತಾನೇ ವಿಕಾಸಗೊಂಡು ತನ್ನ ಮಟ್ಟವನ್ನು ಮುಟ್ಟಬೇಕು.
  —ಎಂ. ಗೋಪಾಲಕೃಷ್ಣ ಅಡಿಗ

- ಗುರಿ ತಪ್ಪಿದರೂ, ಹಾದಿ ತಪ್ಪಬಾರದು.
  —ಎಸ್.ವಿ. ಪರಮೇಶ್ವರಭಟ್